ಬಂದೆ ನೀವೇನೋ ಟೀವಿ ನೋಡ್ತಾ ಇದ್ರಿ ಅದಕ್ಕೆ ಸುಮ್ಮನೆ ನಿಂತುಬಿಟ್ಟೆ' ಎಂದಳು.

'ಸರಿ, ಗುಡಿಸಿಕೊಂಡು ಹೋಗು' ಎಂದ ರಾಜಪ್ಪನು ಅವಳು ರೂಮನ್ನು ಗುಡಿಸಿ ಒರೆಸುವವರೆಗೂ ಬೆಕ್ಕಿನಂತೆ ಅಲ್ಲೆ ಅಡ್ಡಾಡುತ್ತಿದ್ದವನು ಇವಳನ್ನು ಸುಮ್ಮನೆ ಕಳಿಸಿದರೆ ಊರೆಲ್ಲ ನಾನು ಟೀವಿ ನೋಡಿದ ಸುದ್ದಿ ಹೇಳಬಹುದು. ತಾನು ವರ್ಷಗಳಿಂದ ಬೆಳೆಸಿಕೊಳ್ಳುತ್ತಿರುವ ವರ್ಚಸ್ಸು ಮಣ್ಣಾಗಬಹುದು. ಆಮೇಲೆ ಊರವರ ನಮಸ್ಕಾರಗಳೂ, ಅವರು ಹುಂಡಿಗೆ ಹಾಕುವ ಹಣವೂ ಇಲ್ಲವಾಗಬಹುದು. ಜೊತೆಗೆ ತಾನು ಕಷ್ಟಪಟ್ಟು ಬೆಳೆಸಿಕೊಳ್ಳುತ್ತಿರುವ 'ಸತ್ಪುರುಷನ' ಇಮೇಜಿನ ಗತಿ ಏನೆಂದು ಭಯವಾಗತೊಡಗಿತು. ಅವಳು ಹೊರಟಾಗ ಮೆಲ್ಲನೆ ಅವಳ ಬಳಿಗೆ ಬಂದು 'ತಗೋ ಇಟ್ಟುಕೋ' ಎನ್ನುತ್ತಾ ಕೈಗೆ ಐನೂರು ರೂಪಾಯಿ ಇರಿಸಿದ.

'ಅಲ್ಲ ರಾಜಪ್ಪಸಾಮಿ ಕಳೆದ ವಾರಾನೆ ಸಂಬಳ ಕೊಟ್ರಲ್ಲ?' ಎಂದದ್ದಕ್ಕೆ ರಾಜಪ್ಪ 'ಇಲ್ಲ ಇದು ಬ್ಯಾರೆ, ನಾನು ಟೀವಿ ನೋಡಿದ್ದು ಯಾರಿಗೂ ಹೇಳಬೇಡ' ಎಂದು ಬೇಡಿಕೊಳ್ಳುವ ಧಾಟಿಯಲ್ಲಿ ಹೇಳಿದ. 'ಟೀವಿ ನೋಡಿದ್ರೆ ಏನು ತಪ್ಪು, ಊರಲ್ಲಿ ಎಲ್ರೂ ಟೀವಿ ನೋಡಲ್ವ, ಹಳೆಯದಾದರೂ ನಮ್ಮನೇಲೂ ಒಂದು ಟೀವಿ ಇದೆ. ಅದಕ್ಕೆ ನಂಗ್ಯಾಕೆ ಐನೂರು ಭಕ್ಷೀಸು?' ಎಂದುಕೊಳ್ಳುತ್ತಾ ಸುಮ್ಮನೆ ನಿಂತಳು.

ಅವಳಿಗೆ ಕೊಟ್ಟ ದುಡ್ಡು ಸಾಕಾಗಲಿಲ್ಲವೇನೋ ಎಂದೆಣಿಸಿದ ರಾಜಪ್ಪನು 'ಈಗ ಇದು ಇಟ್ಕೊ, ಮನೆ ಖರ್ಚಿಗೆ ಬೇಕಾದ್ರೆ ಸಂಕೋಚ ಇಲ್ದೆ ಕೇಳು ಕೊಡ್ತೀನಿ' ಎಂದು ಅವಳಿಗೆ ಆದಾಯ ಮೂಲದ ಮತ್ತೊಂದು ಮಗ್ಗುಲನ್ನು ತನಗರಿವಿಲ್ಲದೆ ತೋರಿಸಿ ಕೊಟ್ಟುಬಿಟ್ಟ!

ಅನಾಯಾಸವಾಗಿ ದೊರೆತ ಐನೂರನ್ನು ಕುಪ್ಪಸದೊಳಗೆ ಸಿಕ್ಕಿಸಿಕೊಂಡ ರಾಮಕ್ಕ ಅಂಗಳ ಗುಡಿಸಿ ತರಗೆಲೆ ಒಟ್ಟು ಮಾಡುವ ಕೆಲಸಕ್ಕೆ ಹೋದರೂ ಕೆಲಸದಲ್ಲಿ ಮಗ್ನಳಾಗಲು

